(ಇ) ಅಂಕೋಲ ತಾಲ್ಲೂಕಿನ ಬೇಡ್ತಿ ಗಂಗಾವಳಿ ನದಿಗೆ ಹನಿ ನೀರು ವಿದ್ಯುತ್ ಉತ್ಪಾದಿಸಲು ಖಾಸಗಿಯವರಿಗೆ ನೀಡಿರುವುದರಿಂದ ಪರಿಸರಕ್ಕೆ ಹಾನಿಯಾಗುತ್ತಿರುವುದರ ಕುರಿತು

★ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :-ಮಾನ್ಯ ಉಪಾಧ್ಯಕ್ಷರೆ, ಅಂಕೋಲ ತಾಲ್ಲೂಕಿನ ಬೇಡ್ತಿ ನದಿ ನೀರಿನಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಖಾಸಗಿ ಕಂಪನಿಯವರಿಗೆ ಅವಕಾಶ ನೀಡಿದ್ದು, ಇದರಿಂದ ಪರಿಸರಕ್ಕೆ ಬಹಳ ತೊಂದರೆಯಾಗುತ್ತದೆ ಹಾಗೂ ಇದರ ಬಗ್ಗೆ ಜನರ ವಿರೋಧ ಇರುವುದರಿಂದ ಅದನ್ನು ಸಂಪೂರ್ಣ ನಿಲ್ಲಿಸಲು ಮಾನ್ಯ ವಿದ್ಯುತ್ ಮಂತ್ರಿಯವರ ಗಮನ ಸೆಳೆಯುತ್ತೇವೆ.

ಶ್ರೀ ಶಿವಣ್ಣನವರ್ ಬಸವರಾಜ ನೀಲಪ್ಪ (ತಂತ್ರಜ್ಞಾನ ಪರಿಸರ ಮತ್ತು ಅ ಸಂಪ್ರದಾಯಕ ಇಂಧನ ರಾಜ್ಯ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಸರ್ಕಾರವು ಈ ಹಿಂದ ಅಮೆರಿಕನ್ ಕಂಪನಿ ಅಂದರೆ ಮೆ: ಕೆಥನೀಸ್ ರವರೊಂದಿಗೆ 2 10 ಮೆ.ವ್ಯಾ. ಸಾಮಥ್ಯದ ಜಲ ವಿದ್ಯುತ್ ಯೋಜನೆಯನ್ನು ಬೇಡ್ತಿ ನದಿಗೆ ಅಡ್ಡವಾಗಿ ಸ್ಥಾಪಿಸಲು ಎಂ. ಓ. ಯು. ಒಪ್ಪಂದವನ್ನು ಮಾಡಲಾಗಿತ್ತು.

ಈ ಯೋಜನೆಯನ್ನು ಸ್ಥಾಪಿಸಲು ಬೇಡ್ತಿ ನದಿಗೆ ಅಣೆಕಟ್ಟು ನಿರ್ಮಾಣ ಮಾಡಬೇಕಾಗಿದ್ದು ಇದರಿಂದಾಗಿ ಅಲ್ಲಿಯ ಜಮೀನು ಮುಳುಗಡೆಯಾಗುವುದರಿಂದ ಸರ್ಕಾರವು ಈ ಕಂಪನಿಯೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ರದ್ದು ಮಾಡಿತು.

ಇದೇ ರೀತಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು 400 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಬೇಡ್ತಿ ನದಿಯ ದಂಡೆಯ ಮೇಲೆ ಸ್ಥಾಪಿಸಲು ಉದ್ದೇಶಿಸಿತು. ಆದರೆ ಸ್ಥಳೀಯ ಜನರ ಭಾವನೆಗಳನ್ನು ಪರಿಗಣಿಸಿ ಈ ಯೋಜನೆಯನ್ನು ಕೈಬಿಡಲಾಯಿತು. ಕರ್ನಾಟಕವು ನಿರಂತರವಾಗಿ ವಿದ್ಯುತ್ ಅಭಾವವನ್ನು ಎದುರಿಸುತ್ತಿದೆ. ಆದ್ದರಿಂದ ಸರ್ಕಾರವು ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸಲು ಸತತವಾಗಿ ಪ್ರಯತ್ನಿಸುತ್ತಿದೆ. ಸರ್ಕಾರವು ಬಿಜಾಪುರ, ಹೊಸಕೋಟಿ, ಚಾಮಲಪುರ, ಹಾಸನ, ವಾಡಿ, ಧಾರವಾಡ, ರಾಯಚೂರು, ಹರಿಹರ ಇತ್ಯಾದಿ ಸ್ಥಳಗಳಲ್ಲಿ ಥರ್ಮಲ್ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಅನುಮತಿ ನೀಡಿದೆ. ಆದರೆ ಇಂಥಹ ಯೋಜನೆಗಳನ್ನು ನಿರ್ಮಾಣ ಮಾಡಲು ಇವುಗಳ ಸಮಸ್ಯೆಗಳ ಜೊತೆ ಧೀಘಕಾಲ ಬೇಕಾಗಿರುತ್ತದೆ. ಆದ್ದರಿಂದ ವಿದ್ಯುತ್ ಉತ್ಪಾದನೆಯ ಬೆಳವಣಿಗೆಗೆ ಕಿರು ವಿದ್ಯುತ್ ಯೋಜನೆಗಳನ್ನು ಹಾಗೂ ಅಸಾಂಪ್ರದಾಯಿಕವಲ್ಲದ ಇಂಧನ ಮೂಲಗಳ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಸರ್ಕಾರವು ಅನುಮತಿ ನೀಡಿದೆ. ಇವು 'ರನ್ ಆಫ್ ದಿ ರಿವರ್' ಯೋಜನೆಗಳಾಗಿವೆ. ಈ ಯೋಜನೆಗಳಿಂದಾಗಿ ಜಮೀನು ಮುಳುಗಡೆಯಾಗುವುದು ಕನಿಷ್ಠವಾಗಿರುತ್ತದೆ, ಹಾಗೂ ಇವು ಸಾಮಾನ್ಯವಾಗಿ ಹರಿಯುವ ನದಿಗೆ ಸೀಮಿತವಾಗಿರುತ್ತದೆ. ಇದರಿಂದ ರೈತರ ಸ್ಥಳಾಂತರ ಮತ್ತು ಪುನರ್ವಸತಿಯ ಪ್ರಶ್ನೆ ಉದ್ಭವಿಸುವುದಿಲ್ಲ. ಈ 6 ಯೋಜನೆಗಳ ನಿರ್ಮಾಣದಿಂದಾಗಿ ಪ್ರತಿವರ್ಷ ಕನಿಷ್ಠ ಪಕ್ಷ 250 ಮಿಲಿಯನ ಯೂನಿಟ್ಸ್ ವಿದ್ಯುತ್ ಉತ್ಪಾದನೆ ಆಗುವುದರಿಂದ ವಿದ್ಯುತ್ ಅಭಾವವನ್ನು ಎದುರಿಸಲು ಸಾಕಷ್ಟು ಸಹಾಯವಾಗಿರುತ್ತದೆ.

★ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯು ಸರ್ಕಾರದಿಂದ ಶೋಷಣೆಗೆ ಮತ್ತು ದೌರ್ಜನ್ಯಕ್ಕೆ ಒಳಪಟ್ಟಿದೆ, ನಮ್ಮ ಜಿಲ್ಲೆಯನ್ನು ರಾಜ್ಯ ಸರ್ಕಾರವು ದುರ್ಬಳಕೆ ಮಾಡಿಕೊಳ್ಳುತ್ತಿದೆ, ಉತ್ತರ ಕನ್ನಡ ಜಿಲ್ಲೆಯನ್ನು ಈ ರೀತಿ ಶೋಷಣೆ, ದುರ್ಬಳಕೆ ಮತ್ತು ದಬ್ಬಾಳಿಕೆ

ಮಾಡುತ್ತಿರುವ ಬಗ್ಗೆ ನಮ್ಮ ಜಿಲ್ಲೆಯ ಜನರು ಈಗಾಗಲೇ ತೀವ್ರ ಪ್ರತಿಭಟನೆಯನ್ನು ಮಾಡಿದ್ದಾರೆ. ನಮ್ಮ ಜಿಲ್ಲೆಯ ಜನರ ಸರಳತೆ, ವಿನಯ ಮತ್ತು ಸಜ್ಜನಿಕೆಯನ್ನು ದೌರ್ಬಲ್ಯವೆಂದು ಭಾವಿಸಿಕೊಳ್ಳವಾರದು. ನಮ್ಮ ಮುಗ್ಧತನ, ಸುಸಂಸ್ಕೃತತೆ ಮತ್ತು ಉದಾರತೆ ಹಾಗೂ ಸರಳತೆಯನ್ನು ನಮ್ಮ ದೌರ್ಬಲ್ಯವೆಂದು ಸರ್ಕಾರ ಭಾವಿಸಿಕೊಂಡಿದೆ. ಈ ರಾಜ್ಯದ ಅನುಕುಲಕ್ಕಾಗಿ ಈಗಾಗಲೇ ನಮ್ಮ ರಾಜ್ಯದಿಂದ ಒಂದು ಸಾವಿರ ಮೆಗಾವಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಿಕೊಡುತ್ತಿದ್ದೇವೆ. ಮತ್ತೆ ಕೈಗಾ ಇದೆ, ಕೊಡನಹಳ್ಳಿ ಯೋಜನೆಯು ಬರುತ್ತಾ ಇದೆ. ಶರಾವತಿ ಟೇಲ್ ರೇಸ್ ಯೋಜನೆಯೂ ಬರುತ್ತಾ ಇದೆ. ಹಿಂದೆ ನಾಗ್‌ಜರಿ, ಸೂಪಾ ಇತ್ಯಾದಿಗಳನ್ನು ಬಿಟ್ಟು, ಆ ಒಂದು ಸಾವಿರ ಮೆಗಾವಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಿಕೊಡುವುದನ್ನು ಬಿಟ್ಟು ಮತ್ತೆ ಕೈಗಾ, ಕೊಡನಪಳ್ಳಿ, ಶರಾವತಿ ಟೇಲ್‌ರೇಸ್ ಯೋಜನೆಯಿಂದ ವಿದ್ಯುತ್‌ನ್ನು ರಾಜ್ಯಕ್ಕೆ ಉತ್ಪಾದನೆ ಮಾಡಿಕೊಡುತ್ತಾ ಇದ್ದೇವೆ. ನಮ್ಮ ತ್ಯಾಗ ಮತ್ತು ಬಲಿದಾನವು ನಮ್ಮ ರಾಜ್ಯಕೋಸ್ಕರವಾಗಿ ಇದ್ದೇ ಇದೆ. ಆದರೆ ಸರಕಾರ ಅದನ್ನು ಗೌರವಿಸುವುದಿಲ್ಲ ಮತ್ತು ಗುರುತಿಸುವುದಿಲ್ಲ. ಈಗ ಮತ್ತೆ ಬೇಡ್ತಿ ಮತ್ತು ಗಂಗಾವಳಿ ನದಿಗೆ ಖಾಸಗಿ ಕಂಪನಿಗಳವರ ಜೊತೆಗೆ ಒಪ್ಪಂದವನ್ನು ಮಾಡಿಕೊಂಡು ಕೇವಲ 60 ಮೆಗಾವಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕೋಸ್ಕರವಾಗಿ ನಮ್ಮ ಜಿಲ್ಲೆಗೆ ಮತ್ತೆ ಈ ಯೋಜನೆಯನ್ನು ತಂದು ಪುನ: ಜಿಲ್ಲೆಯನ್ನು ಮುಳುಗಡೆ ಮಾಡಲು ಮುಂದಾಗುತ್ತಾ ಇದ್ದಾರೆ. ಈಗಾಗಲೇ ಇದನ್ನು ನಮ್ಮ ಜಿಲ್ಲೆಯ ಜನರು ತೀವ್ರವಾಗಿ ವಿರೋಧಿಸಿದ್ದಾರೆ ಮತ್ತು ಪ್ರತಿಭಟಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬೇಡ್ತಿ, ಅಘ್‌ನಾಶಿನಿ ಕೊಳ್ಳಸಂರಕ್ಷಣಾ ಸಮಿತಿ ಎಂಬ ಒಂದು ಸಮಿತಿಯು ರಚನೆಯಾಗಿ ಪರಮರಾಜ್ಯ ಗಂಗಾಧರೆ ಸರಸ್ವತಿ ಸ್ವಾಮೀಜಿಯವರ ಗೌರವ ಅಧ್ಯಕ್ಷತೆಯಲ್ಲಿ ಹೋರಾಟ ಸಮಿತಿಯ ರಚನೆಯಾಗಿ ನಾವು ಕಳೆದ ಅಕ್ಟೋಬರ್ ತಿಂಗಳ 28 ನೇ ತಾರೀಖಿನ ದಿನ ಅಂಕೋಲಾ ತಾಲ್ಲೂಕಿನ ಅಗಸೂರಿನಲ್ಲಿ ಸುಮಾರು 10- 15 ಸಾವಿರ ಜನರು ಸೇರಿ, ಜನಪ್ರತಿನಿಧಿಗಳು ಮತ್ತು ಜಿಲ್ಲೆಯ ಪ್ರಮುಖರು ಸೇರಿ ಈ ಯೋಜನೆಯನ್ನು ವಿರೋಧಿಸಿದ್ದೇವೆ. ಆದರೂ ನಮಗೆ ನೋವು ಆಗುವಂಥಾದ್ದು ಜನರ ಭಾವನೆಗಳನ್ನು ಸರಕಾರದವರು ಗುರುತಿಸಿಕೊಳ್ಳದೆ ಮತ್ತೆ ಖಾಸಗಿ ಕಂಪನಿಗಳವರು ಈ ಹರಿನೀರು ವಿದ್ಯುತ್ ಯೋಜನೆಗಾಗಿ, ಗಂಗಾವಳಿ ಹರಿಯೋ ಡ್ಯಾಂನ್ನು ಮಾಡುವುದಕ್ಕೋಸ್ಕರವಾಗಿ ಸರ್ವೆ ಕೆಲಸಕ್ಕೆ ಮುಂದಾಗಿದ್ದಾರೆ. ಈಗಾಗಲೇ ಜಿಲ್ಲೆಯ ಪರಿಸರವು ಹಾಳಾಗಿದೆ. ನಮ್ಮ ಜಿಲ್ಲೆಯ ಜನತೆಯ ಕೂಗು ಏನೆಂದರೆ, ಈ ಸಂದರ್ಭದಲ್ಲಿ ಜಿಲ್ಲೆಯ ಜನತೆಯ ಪರವಾಗಿ ಪ್ರಸ್ತಾಪಿಸುತ್ತಿರುವಂತಾದ್ದು ಏನೆಂದರೆ, ಈ ಆರು ಖಾಸಗಿ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡು ಸರ್ವೆ ಮಾಡಲು ಅನುಮತಿಸಿ, ಆ ಯೋಜನೆಯನ್ನು ತರುವುದಕ್ಕೆ ಮುಂದಾಗಿದೆ. ಅದನ್ನು ರದ್ದುಪಡಿಸಬೇಕು. ಯಾವುದೇ ಕಾರಣಕ್ಕೂ ಅಲ್ಲಿ ಸರ್ವೆ ಮಾಡಲು ಅವಕಾಶವನ್ನು ಕೊಡಬಾರದು, ಒಂದು ವೇಳೆ ಸರಕಾರದವರು ಅವಕಾಶ ಕೊಟ್ಟರೆ ಅಲ್ಲಿ ಅನಾಹುತವಾಗುವುದು ನಿಶ್ಚಿತ - ಮತ್ತು ಅದಕ್ಕೆ ಅವಕಾಶವಾಗಬಾರದು. ಎರಡನೆಯದಾಗಿ ಜಿಲ್ಲೆಯಲ್ಲಿ ಹಲವಾರು ವಿದ್ಯುತ್ ಯೋಜನೆಗಳು ಈಗಾಗಲೇ ನಮಗೆ ಬಂದಿರುವುದರಿಂದ, ಅದುಸೀಬರ್ಡ್ ಮುಂತಾಗಿ ಅನೇಕ ಯೋಜನೆಗಳ ಬಗ್ಗೆ ನಾನು ಈಗಾಗಲೇ ಪ್ರಸ್ತಾಪಿಸಿರುವಂತಾದ್ದು ಇರಬಹುದು. ಈಗಾಗಲೇ ಇಂಥ ಅನೇಕ ಯೋಜನೆಗಳು ಬಂದಿರುವುದರಿಂದ ಪಶ್ಚಿಮಘಟ್ಟದ ಅತ್ಯಂತ ಮಹತ್ವವಾದಂಥ ಜಿಲ್ಲೆಯ, ಉತ್ತರ ಕನ್ನಡ ಜಿಲ್ಲೆಯ ಧಾರಣಾ ಸಾಮರ್ಥ್ಯದ ಅಧ್ಯಯನವಾಗಬೇಕು. ಖಾಸಗಿ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡ ಈ ಯೋಜನೆಯನ್ನು ರದ್ದುಗೊಳಿಸಬೇಕು. ಸರಕಾರವು ಅಲ್ಲಿ ಸರ್ವೆಗೆ ಅವಕಾಶ ಮಾಡಿಕೊಡಬಾರದು. ಎರಡನೆಯದಾಗಿ

ಅಲ್ಲಿ ಧಾರಣಾ ಸಾಮರ್ಥ್ಯದ ಅಧ್ಯಯನವಾಗಬೇಕು. ಈಗಾಗಲೇ ಹಲವಾರು ಯೋಜನೆಗಳು ಜಿಲ್ಲೆಗೆ ಬಂದಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇನ್ನು ಯಾವುದೇ ಯೋಜನೆಗಳಿಗೂ ಅವಕಾಶ ಮಾಡಿಕೊಡಬಾರದು ಎಂದು ತಜ್ಞರುಗಳು ಹೇಳುತ್ತಿದ್ದಾರೆ. ಅದಕ್ಕಾಗಿ ಸರಕಾರದವರು ಜಿಲ್ಲೆ ಧರಣಾಸಾಮರ್ಥ್ಯದ ಅಧ್ಯಯನ ಮಾಡಬೇಕು. ಮುರನೇಯದಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ಯೋಜನೆಗಳು ಬರುವುದಿದ್ದರೂ ಜಿಲ್ಲೆಯ ಜನಪ್ರತಿನಿಧಿಗಳ ಜೊತೆಗೆ, ಜಿಲ್ಲೆಯ ಜನತೆಯ ವಿಶ್ವಾಸವನ್ನು ತೆಗೆದುಕೊಂಡು ಸರಕಾರವು ಮುಂದಾಗಬೇಕು. ಅದನ್ನು ಬಿಟ್ಟು ತನ್ನ ಮನಸ್ಸಿಗೆ ಬಂದಂತೆ ಮಾಡಲು ಸರಕಾರವು ಮುಂದಾದರೆ ಜನರು ಅದನ್ನು ವಿರೋಧಿಸುತ್ತಾರೆ. ಮತ್ತು ಅಲ್ಲಿ ಅಸ್ತಿತ್ವದಲ್ಲಿರುವ ಸಮಿತಿಯ ವಿಶ್ವಾಸವನ್ನು ತೆಗೆದುಕೊಳ್ಳಲು ಮುಂದಾಗಬೇಕು. ಈ ವಿಚಾರಗಳಿಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ :- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿಶ್ವೇಶ್ವರಯ ಹೆಗಡೆಯವರು ಹೇಳತಕ್ಕಂಥಾ ವಾದದಲ್ಲೆ ಪರಿಸರವು ನಾಶವಾಗುತ್ತಾ ಇದೆ ಎಂದು ವ್ಯಕ್ತವಾಗುತ್ತದೆ. ಅದು ನಿಜ. ಬೇಡ್ತಿ ಯೋಜನೆ ಎನ್ನತಕ್ಕಂಥಾದ್ದು ಒಂದುಕಾಲದಲ್ಲಿ ಸುಮಾರು 500 ಮೆಗಾವಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಲು ಇರತಕ್ಕಂಥ ದೊಡ್ಡ ಯೋಜನೆಯಾಗಿತ್ತು. ಆ ಯೋಜನೆಗೆ ಆ ಭಾಗದ ಜನರ ಪ್ರತಿಭಟಣೆಯು ಬಂದು ಅದಕ್ಕೆ ಕಟ್ಟಬೇಕಾದ ದೊಡ್ಡ ಅಣೆಕಟ್ಟನ್ನು ಕಟ್ಟಿ ಅದರಲ್ಲಿ ಅರಣ್ಯಗಳ ನಾಶ ಮತ್ತು ಖಾಸಗಿ ಜನರ ಸ್ವತ್ತುಗಳ ನಾಶವಾಗುತ್ತದೆ ಎಂದು ಹೇಳಿ, ಅದು ಸರಕಾರದ ಗಮನಕ್ಕೆ ಬಂದಾದ ಮೇಲೆ ಇದೇ ಸದನದಲ್ಲಿ ಅಂದು ಉಪ-ಮುಖ್ಯ ಮಂತ್ರಿಗಳಾಗಿದ್ದಂಥ ಸನ್ಮಾನ್ಯ ಜೆ.ಹೆಚ್. ಪಟೇಲ್‌ರವರು ಜನರ ಭಾವನೆಗಳಿಗೆ ಸ್ಪಂಧಿಸಿ ಈ ಯೋಜನೆ ಬೇಡ ಎಂದು ನಾವು ಅದನ್ನು ಕೈ ಬಿಟ್ಟಿರುವುದು ನಿಮಗೆ ಗೊತ್ತಿದೆ. ಆದರೆ ಈಗ ತಾವು ಹೇಳತಕ್ಕಂಥ ವಾದದ ಬಗ್ಗೆ ಪರಿಶೀಲನೆ ಮಾಡಿ. ತಾವು ಹೇಳಿದ್ದರಲ್ಲಿ ಒಂದು ವಾದವನ್ನು ನಾನು ಒಪ್ಪುತ್ತೇನೆ. ಜನ ಪ್ರತಿನಿಧಿಗಳ ಜೊತೆಗೆ ಚರ್ಚೆ ಮಾಡಿ ಇದನ್ನು ಮಾಡಬೇಕೆಂದು ಹೇಳುವುದಕ್ಕೆ ಸರಕಾರವು ಬದ್ಧವಾಗಿದೆ. ನಿಮ್ಮೆಲ್ಲರ ಜೊತೆಗೆ ಚರ್ಚೆ ಮಾಡುತ್ತೇವೆ. ನಾವು ಇಲ್ಲಿ ಮಾಡನಾಡುತ್ತಾ ಇರತಕ್ಕಂಥಾದ್ದು ರನ್ ಆಫ್ ದಿ ರಿವರ್ ಸ್ಕೀಮ್ ಮಾತ್ರ. ಯಾವುದೇ ಸಂದರ್ಭಗಳಲ್ಲಿ ಈ ಆರು ಕಂಪನಿಗಳಿಗೆ ಕೊಟ್ಟಿರತಕ್ಕಂಥಾದ್ದು ಕೇವಲ 10 ಮೆಗಾವಾಟ್‌ನ್ನು ಉತ್ಪಾದನೆ ಮಾಡಲು ಮಾತ್ರ. ನಾವು ವಿದ್ಯುತ್‌ಶಕ್ತಿಯನ್ನು ಉತ್ಪಾದನೆ ಮಾಡಲೇಬೇಕು. ನಮಗೆ ಇರತಕ್ಕಂಥಾದ್ದು 3200 ಮೆಗಾವಾಟ್ಸ್ ಮಾತ್ರ. ಕೊಜೆಂಟ್ರಿಕ್ಸ್ ಬಂದರೆ ಇನ್ನೂ 1,000 ಮೆಗಾವಾಟ್ಸ್ ಬರುತ್ತದೆ. ಕದ್ರಾ, ಕೊಡಸಳ್ಳಿ, ರಾಯಚೂರು ಥರ್ಮಲ್‌ನಲ್ಲಿ 5 ಮತ್ತು 6 ನೇ ಘಟಕವನ್ನು ಮಾಡಿದರೆ 2,000 ಇಸವಿಯ ಒಳಗಡೆ ಒಟ್ಟಾರೆ ಇನ್ನು 1,500 ಮೆಗಾವಾಟ್‌ಗಳನ್ನು ಮಾತ್ರ ಕೊಡಲು ಸಾಧ್ಯ. ಆದರೆ ನಾವು ಇಲ್ಲಿಮಾಡತಕ್ಕಂಥದ್ದು ಕೇವಲ ಆರು ಪ್ರಾಜೆಕ್ಟ್‌ಗಳಲ್ಲಿ ಬೇರೆ ಬೇರೆ ಭಾಗಗಳಲ್ಲಿ ರನ್ ಆಫ್ ದಿ ರಿವರ್ ಸ್ಕೀಮ್‌ನ ಮುಖಾಂತರ ಯಾವುದೇ ಭಾಗದಲ್ಲಿ ಒಂದು ಇಂಚು ಜಮೀನು ಸಬ್‌ಮರ್ಶನ್ ಆಗದ ಹಾಗೆ ಅಂದರೆ ಅದು ಅರಣ್ಯ ಭೂಮಿಯಾಗಲೀ, ಖಾಸಗೀ ಭೂಮಿಯಾಗಲೀ, ಸಬ್‌ಮರ್ಶನ್ ಆಗದ ಹಾಗೆ ಈ ಯೋಜನೆಯನ್ನು ಮಾಡುತ್ತೇವೆ. ನೀರು ಸುಮ್ಮನೆ ಹರಿದು ಹೋಗುತ್ತಿರುವುದನ್ನು ತಡೆದು ವಿದ್ಯುತ್‌ಶಕ್ತಿ ಉತ್ಪಾದನೆ ಮಾಡಿ, ಅದರ ಮೂಲಕ 60 ಮೆಗಾವಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಿ, ಅದರಿಂದ ಪರಿಸರ ನಾಶವಾಗುವುದಕ್ಕೆ ಯಾವುದೇ ಕಾರಣವೂ ಇಲ್ಲದೇ ಹೋದರೂ ಕೂಡ ತಾವು ಇದನ್ನು ವಿರೋಧ ಮಾಡುವುದು ಅದರಲ್ಲಿಯೂ ಸರ್ವೆ ಕಾರ್ಯಕ್ಕೆ

ವಿರೋಧ ಮಾಡುವುದು ಸರಿಯೇ? ಸರ್ವೆಕಾರ್ಯವನ್ನು ಮಾಡಿಕೊಂಡು ಇದನ್ನು ಯಾವ ರೀತಿಯಾಗಿ ಮಾಡಬೇಕೆಂಬ ವಿಚಾರದಲ್ಲಿ ಅಲ್ಲಿನ ಜನಪ್ರತಿನಿಧಿಗಳ ಮತ್ತಿತರ ಪ್ರಮುಖರ ಜೊತೆಗೆ ಚರ್ಚೆ ಮಾಡಲು ಸರಕಾರ ಸಿದ್ಧವಿದೆ. ನಿಮ್ಮ ಅಭಿಪ್ರಾಯವನ್ನು ಕೇಳಿ ಅಲ್ಲಿ ಎಲ್ಲಾದರೂ ಮುಳುಗಡೆಯಾಗತಕ್ಕಂಥ ಪರಿಸ್ಥಿತಿ ಬಂದರೆ ಸರಕಾರ ಇದನ್ನು ಮಾಡುವುದೇ ಇಲ್ಲ ಎಂಬ ಮಾತನ್ನು ನಿಮ್ಮ ಜೊತೆಯಲ್ಲಿ ಹಂಚಿಕೊಳ್ಳುತ್ತೇನೆ. ಆದ್ದರಿಂದ ಸರ್ವೆ ಕಾರ್ಯಕ್ಕೆ ತಾವು ಏತಕ್ಕೋಸ್ಕರ ಆಪೋಸ್ ಮಾಡುತ್ತೀರಿ? ಉದಾಹರಣೆಗೆ ನಮ್ಮ ಕೊಡಗು ಜಿಲ್ಲೆಯಲ್ಲಿ ಬರಪೊಳೆ ಎನ್ನತಕ್ಕಂಥ ಸ್ಕೀಂನ್ನು 600 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಉದ್ದೇಶದಲ್ಲಿ ಪರಿಸ್ಥಿತಿಯು ನಿರ್ಮಾಣವಾಯಿತು. ಅಲ್ಲಿ ದೊಡ್ಡ ಕಟ್ಟೆಯನ್ನು ಹಾಕಿದರೆ ದಕ್ಷಿಣ ಕೊಡಗು ಇಡೀ ಮುಳುಗಿ ಹೋಗುತ್ತದೆ ಎಂದುಹೇಳಿ ನಾವೇ ಇದನ್ನು ಸರಕಾರದ ಗಮನಕ್ಕೆ ತಂದಾನ ಅಂದಿನ ಉಪ-ಮುಖ್ಯಮಂತ್ರಿಗಳಾಗಿದ್ದಂಥ ಜೆ. ಹೆಚ್. ಪಟೇಲರು ವಿದ್ಯುತ್ ಮಂತ್ರಿಗಳೂ ಆಗಿದ್ದರು. ಆಗ ಅವರು ಇದು ಬೇಡ ಎಂದು ಕೈಬಿಟ್ಟೆವು. ಇವೊತ್ತು ಕೊಡಗು ಜಿಲ್ಲೆಯಲ್ಲಿ ಬಹಳಷ್ಟು ಫಾಲ್ಸ್‌ಗಳುಂಟು, ರನ್ ಆಫ್ ದಿ ರಿವರ್ ಸ್ಕೀಂಗಳು ಇವೆ, ಇನ್ನೂ ಐದಾರು ಚಿಕ್ಕ ಚಿಕ್ಕ ಹೈಡ್ರಲ್ ಪ್ರಾಜೆಕ್ಟ್‌ಗಳನ್ನು ತೆಗದುಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನಾವು ಅಲ್ಲಿ ಸರ್ವೆ ಮಾಡಿ ಎಂದು ಹೇಳಿದ್ದೇವೆ. ಎಲ್ಲಿ ನಮ್ಮ ಖಾಸಗಿ ಅಥವಾ ಅರಣ್ಯ ಭೂಯಿ ಮುಳುಗಡೆಯಾಗುವುದಿಲ್ಲ, ರನ್ ಆಫ್ ದಿ ರಿವರ್ ಸ್ಕೀಂನಲ್ಲಿ ನಾವು ವಿದ್ಯುತ್‌ಶಕ್ತಿಯನ್ನು ಉತ್ಪಾದನೆ ಮಾಡುವುದಾದರೆ, ಅದಕ್ಕೂ ನಾವು ಬೇಡ ಎಂದು ಹೇಳುವುದು ಬೇಡ. ಹೀಗೆ ಮಾಡಿದರೆ ನಾವು ಎಲ್ಲೋ ಒಂದು ಕಡೆ ನಮ್ಮ ಚಿಂತನೆಯನ್ನು ಹರಿಸುತ್ತಾ ಇದ್ದೇವೆ. ತಮಗೆ ನಾವು ಹೇಳುವುದು ಇಷ್ಟೇ. ಅಲ್ಲಿ ನಾವು ಸರ್ವೆ ಕಾರ್ಯವನ್ನು ಮಾಡುತ್ತೇವೆ. ಸರ್ವೆ ಕಾರ್ಯಮಾಡಿದ ಮೇಲೆ ಬ್ಲೂಪ್ರಿಂಟ್ ಬರುತ್ತದೆ, ಅದು ಬಂದ ಮೇಲೆ ಈ ಕುರಿತು ಯಾವ ರೀತಿಯಲ್ಲಿ ಮುಂದುವರಿಯಬೇಕೆಂದು ನಿಮ್ಮ ಜೊತೆಯಲ್ಲಿ ಚರ್ಚೆ ಮಾಡುತ್ತೇವೆ. ನಿಮ್ಮ ಅಭಿಪ್ರಾಯಗಳನ್ನು ಪಡೆದ ನಂತರವೇ ನಾವು ಮುಂದುವರಿಯೋಣ. ಆದರೆ ಈಗ ಸರ್ವೆ ಕಾರ್ಯಕ್ಕೆ ಏಕೆ ಅಡ್ಡಿ ಬರುತ್ತೀರಿ? ಏಕೆ ಅದಕ್ಕೆ ವಿರೋಧ ಮಾಡುತ್ತೀರಿ ಎಂಬುದು ನಮಗೆ ಅರ್ಥವಾಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೇ, ನನಗೆ ಸರಕಾರದ ಬಗ್ಗೆ ಕನಿಕರ ಉಂಟಾಗುತ್ತದೆ. ಒಂದು ಸಾಮಾನ್ಯ ತಿಳುವಳಿಕೆಯೂ ಸಹ ಸರಕಾರದಲ್ಲಿರುವವರಿಗೆ ಅಧಿಕಾರಿಗಳು ಒದಗಿಸಿಲ್ಲ ಅಂದರೆ, ಬಹಳ ನೋವಾಗುತ್ತದೆ. ನಾವು ಇಲ್ಲೆ ಅರಿಸಿ ಬಂದಂಥವರು ಏನೂ ಜ್ಞಾನವೇ ಇಲ್ಲದವರೇನೂ ಅಲ್ಲ. ಅದನ್ನು ನಿಮ್ಮ ಅಧಿಕಾರಿಗಳಿಗೆ ಹೇಳಿ. ರನ್ ಆಫ್ ದಿ ರಿವರ್ ಕಾನ್ಸಪ್ಟ್ ಏನು? ರನ್ ಆಫ್ ದಿ ರಿವರ್ ಕಾನ್ಸ್‌ಪ್ಟ್ ತಿಳಿದುಕೊಳ್ಳಲು ನಿಮ್ಮ ಸಮಿತಿಯನ್ನು ಸ್ವಿಡ್ಜರ್‌ಲೆಂಡ್‌ಗೆ, ಜಪಾನ್‌ಗೆ ಅಧ್ಯಯನ ಮಾಡಿಕೊಂಡು ಬರಲು ಕಳುಹಿಸಿದ್ದೀರಲ್ಲ? ಹಾಗಾದರೆ ಅಲ್ಲಿ ಹರಿ ನೀರಿನ ಕಾನ್ಸಪ್ಟ್ ಏನು ? ಹರಿ ನೀರು ವಿದ್ಯುತ್ ಉತ್ಪಾದನೆ ಅಂದರೆ, ಸಮುದ್ರದ ತಳಪಾತದಲ್ಲಿ ನೆಲಕ್ಕೆ ಸಮವಾಗಿ ಕಟ್ಟುವಂಥ ಅಣೆಕಟ್ಟಲ್ಲ. ನೀವು ಖಾಸಗಿ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡಿರುವುದು ನೆಲಪಾತಕ್ಕೆ ಸಮಾನಾಂತರವಾಗಿ ಡ್ಯಾಂನ್ನು ಕಟ್ಟಲು ಒಪ್ಪಂದ ಮಾಡಿಕೊಂಡಿರುವುದು. ರನ್ ಆಫ್ ದಿ ರಿವರ್‌ನ ಕಾನ್ಸಪ್ಟ್ ಗುಡ್ಡದಿಂದ ಹರಿದು ಬರುವಂಥ ನೀರಿಗೆ ಸೂಕ್ತ ರೀತಿಯಲ್ಲಿ ವಿದ್ಯುತ್ ಉತ್ಪಾದನೆ ಮಾಡುವ ಕ್ರಮವನ್ನು ತೆಗೆದುಕೊಳ್ಳುವುದು. ಈಗ ಆರುಕಂಪನಿಗಳೊಂದಿಗೆ ನೀವೀಗ ಒಪ್ಪಂದ ಮಾಡಿಕೊಂಡಿದ್ದೀರಲ್ಲ? ಇದು ಸಮುದ್ರದ ಪಾತಳಿಗೆ ಸರಿಯಾಗಿ ಇದೆ. ಇದನ್ನು ಹೇಗೆ ರನ್ ಆಫ್

ದಿ ರಿವರ್ ಎಂದು ಹೇಳುವುದಕ್ಕೆ ಆಗುತ್ತದೆ? ಹಾಗಾದರೆ ನಮಗೆ ಸಾಮಾನ್ಯ ಜ್ಞಾನವು ಇಲ್ಲವೆಂದು ನಿಮ್ಮ ಅಧಿಕಾರಿಗಳು ತಿಳಿದುಕೊಂಡಿದ್ದರೆ ತಪ್ಪಾಗುತ್ತದೆ. ರನ್ ಆಫ್ ದಿ ರಿವರ್ ನ ಕಾನ್‌ಸೆಪ್ಟ್ ಬೇರೆ, ಇವರು ಖಾಸಗಿ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡಿರುವುದು ಬೇಡ. ಹೀಗೆ ಇವರು ಈ ರೀತಿಯಾಗಿ ತಪ್ಪು ಮಾಹಿತಿಗಳನ್ನು ಕೊಡುತ್ತಿರುವುದು ಒಂದು ಭಾಗ. ಇನ್ನೊಂದು ವಿಚಾರ ಅಂದರೆ ನಾವು ಕೊಡಸಳ್ಳಿ ಭಾಗದಲ್ಲಿ ಮುಳುಗಡೆಯಾಗಿ ಪುನರ್‌ವಸತಿ ಕೇಂದ್ರಕ್ಕೆ ಬರುತ್ತಾ ಇದ್ದೇವೆ. ಈ ಡ್ಯಾಂನ್ನು ಕಟ್ಟುವ ಮೂಲಕಾ ಪುನರ್‌ವಸತಿ ಕೇಂದ್ರಮ ಬಂದರೆ, ಈ ಆರು ಡ್ಯಾಂಗ್‌ಗಳನ್ನು ಕಟ್ಟುವ ಮೂಲಕ ನಾವುಗಳು ಮತ್ತೊಮ್ಮೆ ಮುಳುಗಿ ಹೋಗುತ್ತಾ ಇದ್ದೇವೆ. ಹಾಗಾದರೆ ನಮ್ಮ ಜಿಲ್ಲೆಯ ಜನರನ್ನು ಸರಕಾರದವರು ಆಟದ ಗೊಂಬೆಗಳೆಂದು ಭಾವಿಸಿಕೊಂಡಿದ್ದಾರೆಯೇ? ಹೀಗೆ ಸರಕಾರದವರು ಜನರ ಭಾವನೆಗಳ ಜೊತೆಗೆ ಚೆಲ್ಲಾಟವಾಡಿದರೆ ಬಹಳ ಅಪಾಯಕಾರಿಯಾದಂಥ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬರುತ್ತದೆ ಎಂದು ಎಚ್ಚರಿಕೆ ಕೊಡಬಯಸುತ್ತೇನೆ. ಜಿಲ್ಲೆಯ ಜನರು ಈಗಾಗಲೇ ಉಗ್ರವಾದಂಥ ಪ್ರತಿಭಟಣೆಯನ್ನು ವ್ಯಕ್ತಪಡಿಸಿರುತ್ತಾರೆ. ಸರ್ವೆ ಕೆಲಸವನ್ನು ಅಲ್ಲಿ ಮಾಡಲು ಬಿಡುವುದಿಲ್ಲ. ಆದ ಒಪ್ಪಂದವನ್ನು ರದ್ದು ಮಾಡಿಕೊಳ್ಳಬೇಕೆಂದು ನಾನು ಖಡಾಖಂಡಿತವಾಗಿ ಈ ಸದನದಲ್ಲಿ ಹೇಳಬೇಕಾಗುತ್ತದೆ. ಆ ಮಾತನ್ನು ಸರಕಾರದವರು ಇಲ್ಲಿ ಹೇಳದೇ ಹೋದರೆ ಜಿಲ್ಲೆಯ ಜನರು ಅಲ್ಲಿ ಸರ್ವೆ ಮಾಡಲು ಬಿಡುವುದಿಲ್ಲ. ಇದು ಖಂಡಿತವಾದುದರಿಂದ ಸರಕಾರದವರು ಈ ಯೋಜನೆಯನ್ನು ಅಲ್ಲಿ ಮಾಡುವುದನ್ನು ಕೈಬಿಟ್ಟಿದ್ದೇವೆ ಎಂದು ಹೇಳುವ ಘೋಷಣೆಯನ್ನು ಮಾಡಬೇಕು.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ, ಈ ಯೋಜನೆಯನ್ನು ಅಲ್ಲಿ ಜನರ ಭಾವನೆಗಳಿಗೆ ವಿರೋಧವಾಗಿ ಮಾಡುತ್ತಿದ್ದಾರೆ, ಇದನ್ನು ಜಾರಿಗೆ ತಂದರೆ ಇದರಿಂದ ಆಗತಕ್ಕಂಥ ಪರಿಣಾಮವು ಅನಾಹುತ ಎಂಬ ರೀತಿಯಲ್ಲಿ ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ. ಈ ನಾರ್ಥ್ ಕೆನರಾ ಜಿಲ್ಲೆ ಕರ್ನಾಟಕ ರಾಜ್ಯದ ಒಳಗಡೆ ಇರತಕ್ಕಂಥ ಜಿಲ್ಲೆ. ಯಾವ ಸರಕಾರ ಅಧಿಕಾರದಲ್ಲಿದ್ದರೂ ಕೂಡ ಎಲ್ಲಾ ಜಿಲ್ಲೆಗಳ ಜನರ ಭಾವನೆಗಳಿಗೆ ಸ್ಪಂದಿಸಿ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ನಿಮಗೆ ಎಷ್ಟು ಕಳಕಳಿಯ ಆ ವಿಚಾರದಲ್ಲಿ ಇದೆಯೋ ಅಷ್ಟೇ ಕಳಕಳಿಯು ಸರಕಾರಕ್ಕೂ ಇದೆ. ರನ್ ಆಫ್ ದಿ ರಿವರ್ ಸ್ಕೀಮ್ ಯಾವುದಿದೆ ಅದು ಸಮುದ್ರದ ಮಟ್ಟದ ತಳಹಡಿಯಲ್ಲಿ ಇಲ್ಲ ಎಂದು ಹೇಳುತ್ತಾ ಇದ್ದೀರಿ. ತಾವು ಎರಡು ವಿಷಯಗಳನ್ನು ಗಮನಿಸಬೇಕು. ನಾನು ಇದರ ಬಗ್ಗೆ ಸ್ವಲ್ಪ ಅಧ್ಯಯನ ಮಾಡಿದ್ದೇನೆ. ಕೊಡಗು ಜಿಲ್ಲೆ ಇದೇ ರನ್ ಆಫ್ ದಿ ರಿವರ್ ಸ್ಕೀಮ್ ಬಂದಾಗ ನಾವು ಕೂಡ ವಿಚಾರ ಮಾಡಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಅಧ್ಯಕ್ಷರೇ, ಕೊಡಗಿನವರು ಸಮುದ್ರವನ್ನು ನೋಡಿಲ್ಲ. ಸಮುದ್ರ ಪಾತಳಿ ಎಲ್ಲಿರುತ್ತದೆ, ನದಿ ಹೇಗೆ ಹರಿವು ಇರುತ್ತದೆ ಎಂಬುದನ್ನು ನೀವು ಗಮನಿಸಿಲ್ಲವೆಂದು ಕಾಣುತ್ತದೆ. ನಿಮ್ಮ ಪ್ರದೇಶವು ಗುಡ್ಡ ಪ್ರದೇಶಗಳಿಂದ ಕೂಡಿದೆ. ಅಲ್ಲಿ ನೀರು ಮೇಲಿಂದ ಹರಿಯುತ್ತದೆ. ಆದರೆ ನಮ್ಮಲ್ಲಿ ಸಮುದ್ರ ಪಾತಳಿಗೆ ಸರಿಯಾಗಿ ಡ್ಯಾಂ ಕಟ್ಟುವುದಕ್ಕೆ ಯೋಜನೆಯು ಹೊರಟಿದೆ.

ಶ್ರೀ ಎಂ.ಸಿ. ನಾಣಯ್ಯ :- ರನ್ ಆಫ್ ದಿ ರಿವರ್ ಸ್ಕೀಮ್ ಎನ್ನುತಕ್ಕಂಥಾದ್ದು ಒಂದು. ಇನ್ನೊಂದು ಟೈಡಲ್ ವೇವ್ಸ್‌ನಿಂದ ಉತ್ಪಾದನೆ ಮಾಡತಕ್ಕಂಥಾ ಸಂದರ್ಭದಲ್ಲಿ ನೀವು ಹೇಳತಕ್ಕಂಥ ಕಾನ್‌ಸೆಪ್ಟ್ ಒಪ್ಪುತ್ತೇನೆ. ಟೈಡಲ್ ವೇವ್ಸ್‌ನಿಂದ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ ಯೋಜನೆಯೂ ಕೂಡ ಇದ್ದರೂ ನಮ್ಮಲ್ಲಿ ಇನ್ನೂ ಅದನ್ನು ಮಾಡಿಲ್ಲ. ಎಲ್ಲಿಯೂ ಕೂಡ ಯಾವುದೇ ಜಮೀನು

ಸಬ್‌ಮರ್ಶನ್ ಆಗದೇ ಇರತಕ್ಕಂಥಾದ್ದು ಅಲ್ಲಿ ಚಿಕ್ಕ ಚಿಕ್ಕ ಬ್ಯಾರೇಜ್‌ಗಳನ್ನು ಮಾಡಿ ಯಾವುದೇ ಜಮೀನು ನೀರಿನ ಅಡಿಯಲ್ಲಿ ಮುಳುಗಡೆಯಾಗದೇ ಇರತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಅದರ ಮೂಲಕ 60 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡುವ ಯೋಜನೆಗೆ ಸರ್ವೆ ಕಾರ್ಯವನ್ನು ಮಾಡಲು ತಾವುಗಳು ಒಪ್ಪುವುದಿಲ್ಲ ಎಂದು ಹೇಳುತ್ತೀರಿ. ತಾವುಗಳ ಪರಿಸರ ನಾಶ ಎಂದು ಹೇಳುತ್ತೀರಿ? ಹೇಗೆ ಪರಿಸರ ನಾಶ? ಒಂದು ಕಡೆ ವಾಯುಮಾಲಿನ್ಯ ಆಗಬಹುದು, ಇನ್ನೊಂದು ಕಡೆ ಜಲವನ್ನು ಕಟ್ಟಿ ನಮ್ಮಲ್ಲಿರತಕ್ಕಂಥ ಅರಣ್ಯವನ್ನು ತೆಗೆದು ನೀರನ್ನು ಕೆಳಗಡೆ ಮಾಡತಕ್ಕಂಥದ್ದು ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಅದು ಯಾವುದು ಆಗದೆ ಇರತಕ್ಕಂಥ ಪರಿಸ್ಥಿತಿ ಬಂದಾಗ ನಾವು ಈ ಸ್ಕೀಂ ಮುಖಾಂತರ ಮಾಡಲು ಬಂದಾಗ ನಿಮ್ಮ ಜೊತೆಯಲ್ಲಿ ಚರ್ಚೆ ಮಾಡುತ್ತೇವೆ. ಚರ್ಚೆ ಮಾಡಿ ಇ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಅದನ್ನು ನೀವು ಬಿಡುವುದಿಲ್ಲವೆಂದರೆ ಹೇಗೆ? This is a negative approach. Let us not have that negative approach at all: Where there is going to be even 1% disaster to the ecology we will be with you.

ಯಾವುದು ಆಗದಿದ್ದ ಸಂದರ್ಭದಲ್ಲಿ ಸರ್ವೆ ಕಾರ್ಯವನ್ನು ಮಾಡಿ ಒಂದು ಬ್ಲೂ ಪ್ರಿಂಟ್ ಮಾಡಿ ಕಾರ್ಯಕ್ರಮವನ್ನು ಮಾಡುವಾಗ ಜನಪ್ರತಿನಿಧಿಗಳೊಂದಿಗೆ ಚರ್ಚೆಮಾಡಿ ನಾವು ಕಾರ್ಯಕ್ರಮ ಮಾಡುವಾಗ ಅದಕ್ಕೂ ಕೂಡ ಇವರು ಬಿಡುವುದಿಲ್ಲವೆಂದರೆ ಹೇಗೆ?

ಶ್ರೀ ವಿಶ್ವೇಶ್ವರಯ ಹೆಗಡೆ ಕಾಗೇರಿ:- ಸರಳ ಸಾಮರ್ಥ್ಯದ ಕ್ಯಾರಿಂಗ್ ಕೆಪಾಸಿಟಿ ಮೊದಲು ಮಾಡಿಸಿ ಅದರ ಅಧ್ಯಕ್ಷರಾದ ಮೇಲೆ ಮುಂದಿನ ಮಾತು. ಸರ್ಕಾರದ ಜೊತೆ ಜಿಲ್ಲೆಯ ಶಾಸಕರು, ಜನ ಪ್ರತಿನಿದಿಗಳು, ಜಿಲ್ಲೆಯ ಜನತೆ ನಾವು ಮುಕ್ತ ಮನಸ್ಸಿನಿಂದ ಚರ್ಚೆಗೆ ಸಿದ್ದರಾಗಿದ್ದೇವೆ. ಮಾನ್ಯ ನಾಣಯ್ಯನವರು ನಮ್ಮ ಜೊತೆ ಮಾತನಾಡುತ್ತೇವೆಂದು ಸರ್ಕಾರದ ಪರವಾಗಿ ಉತ್ತರವನ್ನು ಕೊಟ್ಟಿದ್ದಾರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಸರಳ ಸಾಮರ್ಥ್ಯದ ಬಗ್ಗೆ ಅಧ್ಯಯನ ಮಾಡಿಸುವುದಕ್ಕೆ ಮುಂದಾಗಬೇಕು.

ಶ್ರೀ ಎಂ. ಸಿ. ನಾಣಯ್ಯ:- carrying capacity in respect of what subjects? ಯಾವ ಪ್ರೊಜೆಕ್ಟ್‌ಗೆ ಸಂಬಂಧಪಟ್ಟ ಹಾಗೆ. ಎಲ್ಲಿ ವಾಯುಮಾಲಿನ್ಯ ಆಗದೇ ಇರತಕ್ಕಂಥ ಪರಿಸ್ಥಿತಿ, ನಾವು ಅಣೆಕಟ್ಟುಗಳನ್ನು ಕಟ್ಟಿ ಚಿಕ್ಕ ಬ್ಯಾರೇಜುಗಳನ್ನು ಕಟ್ಟಿ ಖಾಸಗಿ ಅರಣ್ಯ ಸ್ವತ್ತುಗಳು ಮುಳುಗಡೆ ಆಗೆ ಇರತಕ್ಕಂಥ ಪರಿಸ್ಥಿತಿ ಇದ್ದಾಗ ಕ್ಯಾರಿಂಗ್ ಕೆಪಾಸಿಟಿ ಎಂದು ಹೇಳುವುದಕ್ಕೆ ಅರ್ಥ ಇಲ್ಲ. ಎನ್‌ವೈರಾನ್‌ಮೆಂಟ್‌ಗೆ ಎಲ್ಲಿ ಹೆಜಾರ್ಡ್ ಇಲ್ಲಾ ಅಲ್ಲಿ ಕ್ಯಾರಿಂಗ್ ಕೆಪಾಸಿಟಿ ಬರುವುದಿಲ್ಲ. ಈ ಆಹಾರ ಪರಿಸ್ಥಿತಿಗೆ ಸಂಬಂಧಪಟ್ಟಂತೆ... we will discuss with you. ನಾವು ಸರ್ವೆ ಮಾಡುತ್ತೇವೆ ಆದರೆ ಖರ್ಚು ಮಾಡುವುದಿಲ್ಲ. ಅವರ ಸರ್ವೆ ಮಾಡಿ ಒಂದು ಬ್ಲೂ ಪ್ರಿಂಟ್ ತರುತ್ತಾರೆ. See for yourself whether there is going to be any sub-mersion, whether there is going to be any disaster to the ecology and environment. We are prepared to sit with you and do the job, ನೀವು ಸರ್ವೆ ಕಾರ್ಯಕ್ಕೆ ಅಡ್ಡಿಯನ್ನು ಮಾಡುತ್ತಿದ್ದೀರಿ. Totally it will be a negative approach. Let us not do that.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ವಿಶ್ವೇಶ್ವರ ಹೆಗಡೆಯವರ ಆ ಕಳಕಳಿಯನ್ನು ತಾವು ದಯಮಾಡಿ ಅರ್ಥಮಾಡಿಕೊಳ್ಳಬೇಕು. It should not become a slanging match. What he is telling? " We are ready for a dialogue". If you are able to convince the people of North Canara, ನಾವು ಎನ್ ವಿರಾನ್‌ಮೆಂಟ್ ಡಿಜಾಸ್ಟ್ರ್‌ಮಾಡುವುದಿಲ್ಲ, ಖಾಸಗಿ ಸ್ವತ್ತನ್ನು ಮಾಡುವುದಿಲ್ಲವೆಂದರೆ ಆಗ ಸರ್ವೆ ಕೂಡ ಆಗುತ್ತದೆ. ಸರ್ವೆ ಮಾಡುವ ಮುಂಚೆ ನೀವು ಜನಪ್ರತಿನಿಧಿಗಳ ಜೊತೆ, ಪರಸರವಾದಿಗಳ ಜೊತೆ ಮಾಡನಾಡಬೇಕು. That will be better.

ಶ್ರೀ ಎಂ. ಸಿ. ನಾಣಯ್ಯ :- ನಾವು ಈ ವಿಷಯಕ್ಕೆ ಸಂಬಂಧಪಟ್ಟ ಎಲ್ಲರನ್ನೂ ಚರ್ಚೆಗೆ ಕರೆಯುತ್ತೇವೆ. We will call them, for discussion. We will discuss with them. The Minister will be there. If need be I will be d with you, Thereafter we will convince you and subsequently we will do that. Why should there are objection? ಮತ್ತು ಕೆ.ಪಿ.ಸಿ. ಯವರನ್ನು ಕರೆಯುತ್ತೇವೆ. ವಿದ್ಯುಚ್ಛಕ್ತಿ ಇಲ್ಲ, ವೋಲ್ಟೇಜ್ ಇಲ್ಲ ಡ್ರಿಪ್ ಆಗುತ್ತದೆ, ಎಲ್ಲಾದರೂ ಒಂದು ಕಡೆ ನಾವು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕು. ಸ್ಮಾಲ್ ಹೈಡರ್ ಪ್ರಾಜೆಕ್ಟ್‌ಗೂ ಇದೇ ಪರಿಸ್ಥಿತಿ ಆದರೆ ನಾವು ಥರ್ಮಲ್ ಪವರನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. you know the environmental hazard. ನಿಮ್ಮಲ್ಲಿಂದ ಆಗತಕ್ಕಂಥ ಎನ್ ವಿರೋನ್‌ಮೆಂಟ್ ಹೆಜಾರ್ಡ್ ಚಿಕ್ಕ ಚಿಕ್ಕ ಹೈಡಲ್ ಪ್ರಾಜಕ್ಟ್‌ಗೂ ತೊಂದರೆ ಬಂದರೆ ನಾವು ಥರ್ಮಲ್ ಪ್ರಾಜಕ್ಟ್‌ನ್ನು ಇನ್ನು ಮುಂದೆ ಎಲ್ಲಿ ಮಾಡಬೇಕು? ನಾನು ಒಬ್ಬ ಪರಿಸರವಾದ ಪರಿಸರ ಮತ್ತು ಅಭಿವೃದ್ಧಿ ಎರಡು ಒಂದುಕಡೆ ಸಮತೋಲನವಾಗಲೇ ಬೇಕು. There should be a compromise between environmental and development. It is only the developed countries in the world which have started this dirty thing now. ನಾವು ನಿಮ್ಮ ಜೊತೆಯಲ್ಲಿ ಇರುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಮ್ಮ ಜೊತೆ ಮಾತನಾಡುವುದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಅಲ್ಲಿ ಯಾವುದೇ ಸಮೀಕ್ಷೆ ಒತ್ತಡ ತರುವುದು ಬೇಡ.

ಶ್ರೀ ಎಂ. ಸಿ. ನಾಣಯ್ಯ :- ನಾವು ಒಂದು ಬ್ಲೂಪ್ರಿಂಟ್ ಇಟ್ಟು ಕೊಳ್ಳುತ್ತೇವೆ. ವಿಶ್ವೇಶ್ವರ ಹೆಗಡೆಯವರೆ ಉಪ ನಾಯಕರಾದ ಶ್ರೀ ಸುರೇಶ್ ಕುಮಾರ್ ಅವರು ಹೇಳಿದ್ದಾರೆ. ತಾವು ಕೂಡ ಇದನ್ನು ಸ್ವಾಗತ ಮಾಡಬೇಕು.

ಡಾ: ಎಂ.ಪಿ. ಕರ್ಕಿ (ಕುಮಟಾ) :- ಮಾನ್ಯ ಉಪಾಧ್ಯಕ್ಷರೆ Whether the earth has got capacity to bear those reservoirs? ತಾವು ಈಗ ರನ್ ಆಫ್ ದಿ ರಿವರ್ ಮಾಡಿದರೂ ಕೂಡ ತಾವು ಅಲ್ಲಿ ಬ್ಯಾರೇಜ್ ಕಟ್ಟಬೇಕಾಗುತ್ತದೆ. ನೀರನ್ನು ಸಂಗ್ರಹಿಸಬೇಕಾಗುತ್ತದೆ. it may not be possible to that extent. Whether the earth can bear that weight? ಆದರೂ ಕೂಡ ಅಲ್ಲಿ ಅಣೆಕಟ್ಟು ಕಟ್ಟಿ ನಿರನ್ನು ನಿಲ್ಲಿಸುವುದು ಅಲ್ಲಿ ಆಗುವುದಿಲ್ಲ. ವಿದ್ಯುತ್ ಉತ್ಪಾದನೆ ಆಗುವುದಿಲ್ಲ. ಈಗಾಗಲೇ ನಮ್ಮಲ್ಲಿ ಕೊಡಸಳ್ಳಿ, ಕಾಳಿನದಿ ಯೋಜನೆ ಎಲ್ಲದಕ್ಕೂ ದೊಡ್ಡ ದೊಡ್ಡ

ಬ್ಯಾರೇಜ್ ಕಟ್ಟಿ ನೀರನ್ನು ನಿಲ್ಲಿಸಿದ್ದಾರೆ. ಅಂತಹ ಸಂದರ್ಭದಲ್ಲಿ, Whether the earth can bear that weight? ಅದನ್ನು ಕೂಡ ನೋಡಬೇಕಾಗುತ್ತದೆ, ಮತ್ತೆ ಈ ಚಿಕ್ಕಪುಟ್ಟ ಬ್ಯಾರೇಜ್ ಗಳನ್ನು ಕಟ್ಟುವುದರಿಂದ ಹಾಗೂ ಕೂಡ ತೊಂದರೆಯಾಗುತ್ತದೆ. ಅದರ ಬಗ್ಗೆ ಕೂಡ ವಿಚಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(5) <u>ಅಧ್ಯಕ್ಷರ ಅಪ್ಪಣೆ ಮೇರೆಗೆ</u>

(ಅ) ತುಮಕೂರಿಗೆ HLBC ಗೆ ನೀರನ್ನು ಹರಿಸುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಉಪಾಧ್ಯಕ್ಷರೇ, ನಾನು ಕಳೆದ ವಾರ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಐ.ಸಿ.ಸಿ. ಕಮಿಟಿ ತೀರ್ಮಾನವಾದಂತೆ ತುಮಕೂರಿನ ಹೆಚ್.ಎಲ್.ಬಿ.ಸಿ. ಯಲ್ಲಿ ನೀರನ್ನು ಹರಿಸಲಿಲ್ಲ. 5 ಟಿ.ಎಂ.ಸಿ. ನೀರನ್ನು ತಿಪಟೂರು, ಅರಸಿಕೇರಿ, ಪಟ್ಟಣಕ್ಕೆ ನೀರನ್ನು ಕುಡಿಯಲಿಕ್ಕೆ ಬಿಡಬೇಕಾಗಿತ್ತು ಅದನ್ನು ಬಿಡಲಿಲ್ಲ. ಈಗಾಗಲೇ ಈಚನೂರು ಕೆರೆಯಲ್ಲಿ ಇರುವ ನೀರು ಖಾಲಿಯಾಗಿದೆ. ಬುಗಟನೂರ ಟ್ಯಾಂಕಿನಲ್ಲಿರುವ ನೀರು ಕಡಿಮೆಯಾಗುತ್ತಿರುವುದರಿಂದ ಆ ಕಮಿಟಿಯ ತೀರ್ಮಾನದಂತೆ ನೀರನ್ನು ಬಿಡಬೇಕಾಗುತ್ತದೆ. ಕನಿಷ್ಟ 3 ತಿಂಗಳಾದರೂ ಆ ನಾಲೆಯ ನೀರು ಹರಿಯಬೇಕಾಗುತ್ತದೆ. ಈಚನೂರಿಗೆ ನಾವು ಪಂಪ ಮಾಡಲಿಕ್ಕೆ ನಕಾಶೆ ಮಾಡಿರುವುದು 3 ತಿಂಗಳು, ಈಗ ಜೂನ್ ತಿಂಗಳಿಗೆ ನೀರು ನಿಲ್ಲಿಸುವುದರಿಂದ ಸ್ವಲ್ಪ ತೊಂದರೆಯಾಗುತ್ತದೆ. ಅದಕ್ಕಾಗಿ ನೀರು ಬಿಡುವ ವ್ಯವಸ್ಥೆ ಮಾಡುವುದಕ್ಕೆ ಆಗುತ್ತದೆಯೋ ಹೇಗೆ ಎಂದು ಕೇಳಬಯಸುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :- ಉಪಾಧ್ಯಕ್ಷರೇ, ನಾನು ಈ ವಿಷಯವಾಗಿ ಸಂಬಂಧಪಟ್ಟ ಚೀಫ್ ಇಂಜನೀಯರ್ ಜೊತೆ ಮಾತನಾಡಿದ್ದೇನೆ. ಅಲ್ಲಿರತಕ್ಕಂಥ ಬೆಳೆಗಳಿಗೆ ನೀರನ್ನು ಕೊಡುವುದಕ್ಕಾಗುವುದಿಲ್ಲವೆಂದು ಅಲ್ಲಿರುವ ಚೀಫ್ ಇಂಜನಿಯರ್‌ರವರು ಹೇಳಿದ್ದಾರೆ. ಕುಡಿಯುವ ನೀರಿನ ವಿಚಾರವಾಗಿ ಸ್ವಲ್ಪ ಆಲೋಚನೆ ಮಾಡಬೇಕೆಂದು ಹೇಳಿದ್ದೇನೆ. ಕಾಡಾ ಚೇರ್‌ಮನ್‌ರಿಗೆ ಮತ್ತು ನಮ್ಮ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ಈಚನೂರು ಕೆರೆ ಮತ್ತು ಬುಡುಗನಹಳ್ಳಿ ಕೆರೆಯಿಂದ ಕುಡಿಯುವ ನೀರಿನ ಸಲುವಾಗಿ ಸರ್ಕಾರದಿಂದ ಆದೇಶವನ್ನು ಕೊಡಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಐ.ಸಿ.ಸಿ. ಕಮಿಟಿ ಮೀಟಿಂಗ್ ಮಾಡಿ 5 ಟಿ.ಎಂ.ಸಿ. ನೀರನ್ನು ಕೊಡುತ್ತೇವೆಂದು ಹೇಳಿ ನಿಮ್ಮ ಚೀಫ್ ಇಂಜನಿಯರು ಬಂದು ನೀರು ಇಲ್ಲವೆಂದು ಹೇಳಿದರೆ ಆ ಕಮಿಟಿಗೆ ಬಂದ ಬೆಲೆ ಏನು? ನಮ್ಮನ್ನು ಅಲ್ಲಿಗೆ ಏಕೆ ಕರೆಯಿಸಬೇಕಾಗಿತ್ತು ಮತ್ತು ಮಾತನಾಡಬೇಕಾಗಿತ್ತು. ಕಮಿಟಿಯಲ್ಲಿ ರೆಸ್‌ಲ್ಯೂಷನ್ ಪಾಸ್ ಮಾಡಿ ನಮಗೆ ಒಂದು ಪತ್ರವನ್ನು ಕಳುಹಿಸಿ, ತಮ್ಮ ಹತ್ತಿರ ಬಂದು ನೀರು ಇಲ್ಲವೆಂದು ಹೇಳಿದರೆ ಹೇಗೆ? ಉಪಾಧ್ಯಕ್ಷರೆ ಅಲ್ಲಿ 29 ಟಿ.ಎಂ.ಸಿ. ನೀರು ಇದೆ. 5 ಟಿ.ಎಂ.ಸಿ. ನೀರನ್ನು ನಾವು ಕಾಯ್ದಿರಿಸಿದ್ದೇವೆಂದು ಹೇಳುತ್ತಾರೆ. ಅಲ್ಲಿ ಅಚ್ಚುಕಟ್ಟು ಇರುವುದು 2 ಲಕ್ಷ ಎಕರೆ ಜಮೀನು ಆ ಎಲ್ಲಾ ಜಮೀನಿಗೆ ನೀರು ಕೊಡುವುದಕ್ಕೆ ನಿಮ್ಮ ನಾಲೆಯ ಡಿಸ್ಟ್ರಿಬ್ಯೂಟರ್ಸ್ ಅಗಿಲ್ಲ. ನೀವು ಈಗಲೇ ಈ ರೀತಿ ಹೇಳುತ್ತೀರಿ, ಮುಂದೆ ತಿಪಟೂರಿಗೆ ನೀರು ಹೇಗೆ ಕೊಡುತ್ತೀರೆಂದು ನನಗೆ ಅನಿಸುತ್ತದೆ.